


# ಸೋಷಿಯಲ್ ನೆಟ್‌ವರ್ಕ್‌ಗೆ ಮತ್ತೆ ಬಂದ ಗೂಗಲ್

ಸೋಷಿಯಲ್ ನೆಟ್‌ವರ್ಕ್ ಕ್ಷೇತ್ರದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಚಾಲ್ತಿಯಲ್ಲಿರುವ ಫೇಸ್‌ಬುಕ್ ಹಾಗೂ ಟ್ವಿಟರ್ ಎದುರು ಸೆಟೆದು ನಿಲ್ಲಲು 'ಗೂಗಲ್ ಶೂಲೇಸ್' **(Google Shoelace)** ಎಂಬ ಆ್ಯಪ್ ಮೂಲಕ ಗೂಗಲ್ ಮತ್ತೆ ಸಜ್ಜಾಗಿದೆ.

'ಗೂಗಲ್ ಶೂಲೇಸ್'ನ ಪ್ರಾಯೋಗಿಕ ಪರೀಕ್ಷೆ ನ್ಯೂಯಾರ್ಕ್‌ನಲ್ಲಿ ನಡೆಯುತ್ತಿದ್ದು, ಅಲ್ಲಿನ ಜನರ ಬಳಕೆಗೆ ಇದನ್ನು ಮುಕ್ತಗೊಳಿಸಲಾಗಿದೆ. ಸ್ನೇಹಿತರ ಆಹ್ವಾನದ ಮೇರೆಗೆ ಕಾರ್ಯನಿರ್ವಹಿಸುವ ಈ ಆ್ಯಪ್ ಬಗ್ಗೆ ವ್ಯಕ್ತವಾಗುವ ಪ್ರತಿಕ್ರಿಯೆ ಆಧರಿಸಿ ಗೂಗಲ್ ವಿಶ್ವದಾದ್ಯಂತ ಇದನ್ನು ಪರಿಚಯಿಸಿ, ಸೋಷಿಯಲ್ ನೆಟ್‌ವರ್ಕ್ ಕ್ಷೇತ್ರದಲ್ಲಿ ತಾನು ಕಳೆದುಕೊಂಡ ಸ್ಥಾನ ಪಡೆಯಲು ಉದ್ದೇಶಿಸಿದೆ.

ಫೇಸ್‌ಬುಕ್ ಹಾಗೂ ಟ್ವಿಟರ್‌ನಲ್ಲಿ ಸಾಧ್ಯವಾಗುವಂತೆ ಅನಿಯಮಿತವಾಗಿ ಯಾವುದೇ ದೇಶದ ವಾಸಿಗಳನ್ನು ಸ್ನೇಹಿತರನ್ನಾಗಿಸಿಕೊಳ್ಳುವ ಹಾಗೂ ಅವರನ್ನು ಫಾಲೋ ಮಾಡುವಂತಹ ವ್ಯವಸ್ಥೆ ಶೂಲೇಸ್‌ನಲ್ಲಿಲ್ಲ. ತೀರಾ ಆತ್ಮೀಯರು,




ತಮ್ಮ ಊರಿನವರು, ಒಂದೇ ಮನಸ್ಥಿತಿ ಉಳ್ಳವರು, ಸಮಾನ ಹಿತಾಸಕ್ತಿಯುಳ್ಳವರನ್ನು ಒಂದುಗೂಡಿಸುವ ವೇದಿಕೆಯಾಗಿ ಅದು ಕಾರ್ಯನಿರ್ವಹಿಸಲಿದೆ. ಅದಕ್ಕಾಗಿ ಪ್ರತ್ಯೇಕ ಫೀಚರ್‌ಗಳನ್ನು ಅದರಲ್ಲಿ ಒದಗಿಸಲಾಗಿದೆಯಂತೆ.

ಅಂತರ್ಜಾಲ ಸಂಪರ್ಕಿತ ಅವಾಸ್ತವಿಕ ಜಗತ್ತಿಗಿಂತಲೂ ವಾಸ್ತವ ಜಗತ್ತಿನಲ್ಲಿ ಹೆಚ್ಚು ಕೆಲಸ ಮಾಡುವಂತೆ, ಸ್ನೇಹಿತರನ್ನು ಒಂದುಗೂಡಿಸುವ ವೇದಿಕೆಯಾಗಲಿದೆ ಎಂಬುದು ಗೂಗಲ್‌ನ ಮಾತಾಗಿದೆ. ಶೂಲೇಸ್ ತನ್ನ ಅಧಿಕೃತ ಜಾಲತಾಣದಲ್ಲಿ ಹೇಳಿಕೊಂಡಿರುವಂತೆ, ಪ್ರಸ್ತುತ ನ್ಯೂಯಾರ್ಕ್‌ನಲ್ಲಿ ಮಾತ್ರ ಈ ಆ್ಯಪ್ ಲಭ್ಯ. ಶೀಘ್ರವೇ ಅಮೆರಿಕದ ಇತರ ನಗರಗಳಿಗೂ ವಿಸ್ತರಣೆಯಾಗಲಿದೆ. ಬಳಕೆದಾರರ ಆಸಕ್ತಿಗೆ ಸ್ಪಂದಿಸುವ ಈ ಆ್ಯಪ್, ಅದಕ್ಕೆ ಅನುಸಾರವಾಗಿ ಅವರಿರುವ ಜಾಗದ ಸುತ್ತಮುತ್ತ ನಡೆಯುವ, ಆಸಕ್ತಿಗೆ ಸಂಬಂಧಿಸಿದ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡುತ್ತದೆ. ಒಂದೇ ರೀತಿಯ ಮನಸ್ಥಿತಿ ಉಳ್ಳವರು ವಾಸ್ತವ ಜಗತ್ತಿನ ನಿಜ ಸ್ನೇಹಿತರಾಗಿ ಸಾಗಲು ಇದು ಪ್ರೇರೇಪಿಸುತ್ತದೆ ಅಂತೆ.

ಪ್ರಾದೇಶಿಕ ನಿರ್ಬಂಧಗಳಷ್ಟೇ ಅಲ್ಲದೆ, ಇದು ಆಹ್ವಾನದ ಮೇರೆಗೆ ಮಾತ್ರ ದೊರೆಯುವ ಆ್ಯಪ್. ಆಂಡ್ರಾಯ್ಡ್‌ನ ಪ್ಲೇ ಸ್ಟೋರ್ ಹಾಗೂ ಐಒಎಸ್‌ನ ಆ್ಯಪ್ ಸ್ಟೋರ್‌ಗಳಲ್ಲಿ ಇದು ಲಭ್ಯ. ಈಗಾಗಲೇ ಆರ್ಕುಟ್, ಗೂಗಲ್ ಪ್ಲಸ್, ಬಜ್ ಮುಂತಾದ ಸಾಮಾಜಿಕ ಸಂಪರ್ಕ ತಾಣಗಳ ಮೂಲಕ ಚಾಲ್ತಿಗೆ ಬಂದು ಯಶಸ್ಸು ಸಿಗದೆ ಅವುಗಳ ಸೇವೆಯನ್ನು ಗೂಗಲ್ ನಿಲ್ಲಿಸಿತ್ತು. ಗೂಗಲ್ ಶೂಲೇಸ್ ಮೂಲಕ ಮತ್ತೆ ಚಾಲ್ತಿಗೆ ಬಂದಿರುವ ಇದರಲ್ಲಾದರೂ ಪರಿಣಾಮಕಾರಿಯಾಗಿ ಯಶಸ್ಸು ಕಾಣುತ್ತದೆಯೇ ಕಾದು ನೋಡಬೇಕಿದೆ.

■ ಸಿರಿ

